

ಅರುಣ ಪಿ. ಭಟ್ಟ

## ವಾರಭವಿಷ್ಯ 14.07.2022ರಿಂದ 20.07.2022ರವರೆಗೆ




ಕಚೇರಿ ಕೆಲಸದಲ್ಲಿ ಪ್ರಯತ್ನದಿಂದ ಶುಭವಾಗಲಿದೆ. ಈ ವಾರದ ಆರಂಭದಲ್ಲಿ ಚಿಕ್ಕ ಪ್ರವಾಸವನ್ನು ಕೈಗೊಳ್ಳುತ್ತೀರಿ. ಮನೆಯಲ್ಲಿ ಗೊಂದಲ ಪ್ರವೃತ್ತಿಯನ್ನು ಮಾಡದೆ ಇರುವುದು ಕ್ಷೇಮ. ಬೇಡದ ವ್ಯಕ್ತಿಗಳ ಆಗಮನ. ತಾಯಿಯ ಆರೋಗ್ಯ ವ್ಯತ್ಯಾಸ. ಸೇವಕರಿಂದ ಹರ್ಷ. ವಾರದ ಮಧ್ಯಭಾಗದಲ್ಲಿ ಮನಸಂತೋಷಕರ ಘಟನೆ. ಶುಭದಿನ: 20. ದೇವ್ಯಪರಾದ ಕ್ಷಮಾಪನ ಸ್ತೋತ್ರ 12 ಸಾರೆ ಪಠಣ ಮಾಡಿ.




ನಿಮ್ಮ ವೈಯಕ್ತಿಕ ಶ್ರಮದಿಂದ ಹೆಚ್ಚಿನ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಕೆಲಸ–ಕಾರ್ಯಗಳನ್ನು ಪೂರೈಸಲಾಗುತ್ತದೆ. ಇದರಿಂದ ನಿಮಗೆ ಸಂತುಷ್ಟವಾಗುತ್ತದೆ. ಬಹುದಿನಗಳ ಆಕಾಂಕ್ಷೆ ಪೂರ್ಣವಾಗಲು ವೇದಿಕೆ ಸಿದ್ಧವಾಗುವುದು ಕುಟುಂಬಸ್ಥರೊಡನೆ ಪ್ರವಾಸ, ಕ್ಷೇತ್ರದರ್ಶನ. ಅರ್ಧಕ್ಕೆ ನಿಂತ ಮನೆಗೆಲಸಕ್ಕೆ ಚಾಲನೆ ದೊರೆಯುವುದು. ಶುಭದಿನ: 15. ವೆಂಕಟೇಶ್ವರ ಪ್ರಾರ್ಥನೆ ಮಾಡಿರಿ.




ಸಮಸ್ಯೆಗಳ ಸರಮಾಲೆಯಲ್ಲಿ ಇಡಿ ವಾರ ಕಳೆಯುವುದು ಸ್ಪರ್ಧಾತ್ಮಕತೆಯಲ್ಲಿ ಅಪಜಯ. ವಿನಾಕಾರಣ ಭಯದ ವಾತಾವರಣ. ಆದರೆ ಕೌಟುಂಬಿಕ ಸೌಖ್ಯ ಚೆನ್ನಾಗಿರುವುದು. ಕ್ರಯ ವಿಕ್ರಯಗಳಲ್ಲಿ ಒಳ್ಳೆ ಲಾಭ ಕೋರ್ಟ್ ಪ್ರಕರಣಗಳನ್ನು ಮುಂದೂಡಿರಿ. ಸಹೋದರ ಸಹಾಯ ವಾಹನ ಖರೀದಿಗೆ ಉತ್ತಮ. ಅನಾರೋಗ್ಯ ಸಂಭವ. ಲೇಖನಿ ಕೆಲಸದಲ್ಲಿ ಪ್ರಗತಿ. ಶುಭದಿನ 14. ನವನಾಗನಾಮ ಸ್ತೋತ್ರ ಪಠಿಸಿರಿ.




ವಾರವಿಡಿ ಶುಕ್ರನು ಏರಿಕೆ ಕ್ರಮದಲ್ಲಿ ಇರುವುದರಿಂದ ನಿಮಗೆ ಶುಭ ನೀಡುವನು. ಜನ್ಮದಲ್ಲಿ ಬುಧ, ಶುಕ್ರ ಯುತಿ ಇದೆ. ಈವಾರ ಉತ್ತಮ ಆರೋಗ್ಯದಿಂದ ಖುಷಿಯಿಂದ ಇರುತ್ತೀರಿ. ಅನೀರಿಕ್ಷಿತವಾಗಿ ಭಾಗ್ಯದ ಬಾಗಿಲು ತೆರೆಯುವುದು. ಶತ್ರು ಪರಾಜಯ ಬಂಧುಗಳಿಂದ ಶುಭ ಸಂದೇಶ. ವಾರದ ಪ್ರಾರಂಭದಲ್ಲಿ ಅಕಸ್ಮಾತ್ ಖರ್ಚು. ಶುಭದಿನ 17. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಖರ್ಚು ನಿರಾಶೆಯ ಪ್ರಸಂಗಗಳು ವಾರವಿಡಿ ಮುಂದುವರೆಯುವುದು. ಬರುವ ಲಾಭ ಅರ್ಧದಲ್ಲಿ ತಡೆಯುವುದು. ಸ್ನೇಹಿತರ ಶುಭಕಾರ್ಯಕ್ಕೆ ಸಹಾಯ ಮಾಡುವಿರಿ. ಮಾನಸಿಕ ಗೊಂದಲ ನಿಮ್ಮನ್ನು ಚಿಂತೆಗೆ ಉಂಟು ಮಾಡುತ್ತದೆ. ಹೊಟ್ಟೆನೋವಿನ ಉಪದ್ರವ ಕಾಡುತ್ತದೆ. ಅಧಿಕಾರ ಪ್ರಾಪ್ತಿಗೆ ರಂಗಸಿದ್ಧತೆಗೆ ಕೊಂಚ ತೊಡಕು ಉಂಟಾಗಬಹುದು. ಶುಭದಿನ 15. ಮಾರುತಿ ಉಪಾಸನೆ ಹನುಮಾನ್ ಕವಚ ಪಠಿಸಿರಿ.




ಶ್ರಮವಿಲ್ಲದೆ ಕೆಲಸಗಳು ಸುಲಭವಾಗಿ ನಡೆಯುತ್ತವೆ. ಮಧ್ಯಸ್ಥಿಕೆದಾರರಿಂದ ವಿವಾಹದ ಬಗ್ಗೆ ಶುಭಸುದ್ದಿ ದೊರಕುವುದು. ಹಳೆಯ ಆಪ್ತರು ಬಹುದಿನಗಳ ನಂತರ ಹತ್ತಿರವಾಗುವರು. ವ್ಯಾಪಾರದಲ್ಲಿ ಅಧಿಕ ಲಾಭ ದೊರೆಯಲಿದೆ. ವಾಹನದಿಂದ ಸೌಖ್ಯ. ವಾರಾಂತ್ಯದಲ್ಲಿ ಪ್ರವಾಸದಲ್ಲಿ ಕೊಂಚ ತೊಂದರೆಯಾಗುವ ಸಂಭವ ಇದೆ ಜಾಗ್ರತೆ ತೆಗೆದುಕೊಳ್ಳಬೇಕು. ಶುಭದಿನ 16. ಗಣಪತಿಗೆ 108 ದೂರ್ವಾರ್ಚನೆ ಮಾಡಿರಿ.




ಈ ತಿಂಗಳ ಶುಭರಾಶಿ ನಿಮ್ಮ ಪಾಲಿಗೆ ಇರಲಿದೆ. ದಶಮದ ಬುಧ, ಶುಕ್ರ, ಯುತಿಯಿಂದ ಅಧಿಕಾರ ಪ್ರಾಪ್ತಿಯಾಗುತ್ತದೆ. ಸರಕಾರದಿಂದ ಆರ್ಥಿಕ ಲಾಭ ಮತ್ತು ಮನ್ನಣೆ ಸಿಗುವ ಸಾಧ್ಯತೆ ಇದೆ. ಕುಟುಂಬದ ಮುಖ್ಯಸ್ಥರಿಗೆ ಪ್ರಗತಿ ಕಾಣಿಸುತ್ತದೆ. ಹೊಸ ಉದ್ಯೋಗ ಶುರುಮಾಡಲು ಸಿದ್ಧತೆ ನಡೆಸುವವರಿಗೆ ಇದು ಸಕಾಲ. ಶುಭ ದಿನ 19. ನವಗ್ರಹ ಸ್ತೋತ್ರ ಪಠಣ ಮಾಡಿರಿ.




ನಿಮ್ಮ ವೈಯಕ್ತಿಕ ಶ್ರಮದಿಂದ ಸಾಡೆಸಾತಿ ಇದ್ದರೂ ಯಶಸ್ಸು ಪಡೆಯುವಿರಿ. ಅರ್ಹರಿಗೆ ದೂರ ಪ್ರವಾಸ ಯೋಗವಿದೆ ಬಳಸಿಕೊಳ್ಳಬೇಕು. ಸ್ತ್ರೀ ಮೂಲಕ ಅರ್ಥಲಾಭ. ನೌಕರಿದಾರರಿಗೆ ಕೆಲಸದಲ್ಲಿ ಸ್ಥಿರತೆ. ಮನೆಯಲ್ಲಿ ದೇವತಾರ್ಚನೆ ಕಾರ್ಯ ಮಾಡುವಿರಿ. ಕೌಟುಂಬಿಕ ಕಲಹ ತಹಬದಿಗೆ ಬರಲಿದೆ. ವಾರದ ಕೊನೆಯಲ್ಲಿ ಸಂತಸದ ವಾತಾವರಣ. ಶುಭದಿನ 14. ಗೌರಿಪೂಜೆ ಗೋಪೂಜೆ ಮಾಡಿರಿ.




ಖಂಡಿತ ತೊಂದರೆಯಲ್ಲಿ ಸಿಲುಕಿದ ರಾಶಿ, ಸ್ವಲ್ಪ ತೊಂದರೆ ಉಂಟಾಗುತ್ತದೆ. ಹೊಯ್ದಾಡುವ ಮನಸ್ಸು. ಹೆಂಡತಿಯ ಅನಾರೋಗ್ಯದಿಂದ ಅಧಿಕ ಹಣ ಖರ್ಚು. ಕೆಲಸದಲ್ಲಿ ಅಪವಾದದ ಭಯ ಕಾಡದೆ ಬಿಡುವುದಿಲ್ಲ. ನೀರಿನಿಂದ ಕಂಟಕ ಎದುರಿಸುತ್ತೀರಿ. ಅಧಿಕಾರ ಭಂಗ ಪ್ರಸಂಗ. ಮಕ್ಕಳ ಆರೋಗ್ಯದಲ್ಲಿ ಏರುಪೇರು ಆಗಬಹುದು. ಶುಭದಿನ 21. ಸದ್ಗುರು ಆರಾಧನೆ ಮಾಡಿ.




ಅತ್ಯುತ್ತಮ ಶುಭ ಘಟನೆಗಳೊಡನೆ ಆಪತ್ತನ್ನು ಎದುರಿಸುವಿರಿ. ವಿದ್ಯಾರ್ಥಿಗಳಿಗೆ ಪರಿಕ್ಷೆಯಲ್ಲಿ ಉತ್ತಮ ಯಶಸ್ಸು ಪ್ರಾಪ್ತಿಯಾಗುತ್ತದೆ. ಹೊಸ ವಸ್ತು ಖರೀದಿ. ಗೃಹಿಣಿಯರ ಆಭರಣ ಖರೀದಿ. ಕ್ರೀಡಾಪಟುಗಳಿಗೆ ಸನ್ಮಾನ – ಪುರಸ್ಕಾರ ಹೊದಿಕೆ ಸಂತೋಷವನ್ನು ಉಂಟು ಮಾಡುತ್ತದೆ ವಾಹನ ಖರೀದಿಗೆ ಉತ್ತಮ. ಸಹೋದರರಿಂದ ಸಹಾಯ ದೊರಕುತ್ತದೆ. ಶುಭದಿನ 14. ಗಣಪತಿ ಆರಾಧನೆ ಮಾಡಿರಿ.




ಬಹು ದಿನಗಳಿಂದ ಅಲೆಯುತ್ತಿದ್ದ ಕೋರ್ಟ್ ಪ್ರಕರಣ ಮುಗಿಯುತ್ತದೆ. ಶತ್ರುವಿನ ನಿಗ್ರಹ ಆಗಲಿದೆ. ಆರೋಗ್ಯದಲ್ಲಿ ಸುಧಾರಣೆಯಾಗಲಿದೆ. ಚೇತರಿಕೆಯಿಂದ ಕಾಣಿಸುತ್ತೀರಿ. ಸರ್ಕಾರಿ ನೌಕರರಾಗಿದ್ದಲ್ಲಿ ಕೆಲಸದಲ್ಲಿ ಬಡ್ತಿ ಮತ್ತು ವರ್ಗಾವಣೆಯೂ ಆಗಬಹುದು. ಶೈಕ್ಷಣಿಕ ಕ್ಷೇತ್ರದವರಿಗೆ ಕೊಂಚ ನಿರಾಳ. ಶುಭದಿನ 18. ಲಕ್ಷ್ಮೀನರಸಿಂಹ ಕ್ಷೇತ್ರ ದರ್ಶನ ಮಾಡಿರಿ.




ಕ್ರೀಡಾಪಟುಗಳಿಗೆ ಉತ್ತಮ ಯಶಸ್ಸು. ಷೇರು ವ್ಯವಹಾರದಾರರಿಗೆ ಅನಿರೀಕ್ಷಿತ ಲಾಭ ಉಂಟಾಗಲಿದೆ. ಮಕ್ಕಳಿಂದ ಯಶಸ್ಸು ಸ್ಥಾನಮಾನ ಪ್ರಾಪ್ತಿ. ಮನೆ ವಿಷಯಕ್ಕೆ ಇರುವ ಅಡ್ಡಿ ನಿವಾರಣೆ ಆಗುತ್ತದೆ. ದೂರದ ಪ್ರವಾಸ ಮಾಡಲಿದ್ದೀರಿ. ಲೇಖಕರಿಗೆ ಪ್ರಶಸ್ತಿ ಗೌರವ ಸಿಗುತ್ತದೆ. ಬಹುದಿನಗಳಿಂದ ನಿರೀಕ್ಷಿತ ಫಲ ಪ್ರಾಪ್ತಿ. ಶುಭದಿನ 20. ಆದಿತ್ಯ ಹೃದಯ ಸ್ತೋತ್ರ ಪಠಿಸಿ.